ಥ್ರಿಪ್ಸ್ ಈ ಎಲ್ಲಾ ಕೀಟಗಳಲ್ಲಿ ಅತ್ಯಂತ ಚಲನಶೀಲ ಕೀಟ. ರಸ ಹೀರುವುದು, ಅಂಗಾಂಶವನ್ನು ಕೆರೆದು ತಿನ್ನುವ ಥ್ರಿಪ್ಸ್ ಎಲೆಗಳ ಮೇಲೆ ಬೆಳ್ಳಿ ಕಲೆಗಳನ್ನು ಉಂಟುಮಾಡುತ್ತವೆ.

ಈ ಎಲ್ಲಾ ರಸ ಹೀರುವ ಕೀಟಗಳಿಗೆ ಕೆಲವು ಸಾಮಾನ್ಯ ಗುಣಲಕ್ಷಣಗಳಿವೆ:

- ಇವೆಲ್ಲವುಗಳ ಗಾತ್ರ ಒಂದರಿಂದ ಐದು ಎಂ.ಎಂ. ಆಚೀಚೆಯಷ್ಟೇ!
- ಮೊಟ್ಟೆ ಮರಿಗಳೊಂದಿಗೆ ಗುಂಪುಗುಂಪಾಗಿ ಚಿಗುರು, ಕಾಂಡ ಹೂವು, ಮೊಗ್ಗು, ಎಲೆಯಂಥ ಮೃದು ಭಾಗಗಳಲ್ಲಿ ಕೂತು ರಸ ಹೀರುತ್ತವೆ.
- ರಸ ಹೀರಿದ ನಂತರ ಜೀರ್ಣವಾಗದ ಪದಾರ್ಥವನ್ನು ವಿಸರ್ಜಿಸುತ್ತವೆ. 'ಹನಿ ಡ್ಯೂ' ಎಂದು ಕರೆಯಲಾಗುವ ಈ ವಸ್ತು ಸಿಹಿಯಾಗಿದ್ದು ಇರುವೆಗಳನ್ನು ಆಕರ್ಷಿಸುತ್ತದೆ. ಮೋಹಗೊಂಡ ಇರುವೆಗಳು ಭೇಟಿ ಇತ್ತಾಗ ಅವುಗಳ ದೇಹದ ಮೇಲೇರುವ ಕೀಟಗಳು ಗಿಡದಿಂದ ಗಿಡಕ್ಕೆ ಹಬ್ಬುತ್ತಾ ಸಾಗುತ್ತವೆ. ಇರುವೆಗಳು ಕೀಟಗಳನ್ನು ಭಕ್ಷಿಸುತ್ತಿವೆಯೆಂದು ಅನ್ನಿಸಿದರೆ ನಿಮ್ಮ ಭ್ರಮೆ.
- ಈ ಸಿಹಿ ಪದಾರ್ಥದ ಮೇಲೆ 'ಸೂಟಿ ಮೌಲ್ಡ್' ಎಂಬ ಶಿಲೀಂಧ್ರ ಕೂಡ ಬೆಳವಣಿಗೆಯಾಗುತ್ತದೆ. ಕಪ್ಪು ಮಸಿಯ ಲೇಪನ ಸಸ್ಯಗಳ ದ್ಯುತಿಸಂಶ್ಲೇಷಣಾ ಕ್ರಿಯೆಗೆ ಅಡಚಣೆ ಉಂಟುಮಾಡುತ್ತದೆ.
- ಈ ಕೀಟಗಳು ಸಸ್ಯಗಳಲ್ಲಿ ವೈರಾಣುಗಳನ್ನು ಹಬ್ಬಿಸುತ್ತವೆ.

## ಹತೋಟಿ ಕ್ರಮಗಳು

- ನೈಸರ್ಗಿಕವಾಗಿ ಗುಲಗಂಜಿ ಹುಳು (ಲೇಡಿ ಬರ್ಡ್ ಬೀಟಲ್), ಲೇಸ್ ವಿಂಗ್‌ನಂಥ ಪರಭಕ್ಷಕ ಕೀಟಗಳು ರಸ ಹೀರುವ ಕೀಟಗಳನ್ನು ನಿಯಂತ್ರಣದಲ್ಲಿಡುತ್ತವೆ. ಆದರೆ ಚಳಿಗಾಲದಂಥ ಅನುಕೂಲಕರ ವಾತಾವರಣದಲ್ಲಿ ಇವು ಅಂಕೆ ಮೀರಿ ಬೆಳೆದಾಗ ಹತೋಟಿ ಅನಿವಾರ್ಯ.
- ರಸ ಹೀರುವ ಕೀಟಗಳು ಎಲೆಯ ಕೆಳಭಾಗದಲ್ಲಿರುವ ಕಾರಣ ಸಂಖ್ಯೆಯಲ್ಲಿ ವೃದ್ಧಿಯಾಗಿ ರೋಗ ಲಕ್ಷಣ ತೀವ್ರವಾಗುವವರೆಗೂ ಗಮನಕ್ಕೆ ಬರದೇ ಇರಬಹುದು. ಹಾಗಾಗಿ ಎಲೆಯ ಹಿಂಭಾಗ ನೋಡುವ ಅಭ್ಯಾಸ ರೂಢಿಸಿಕೊಳ್ಳಿ.



- ರಸ ಹೀರುವ ಕೀಟ ಒಂದೇ ಒಂದು ಕಂಡರೂ ಹೊಸಕಿ ಸಾಯಿಸಿ. ಇಲ್ಲವೇ ಒಂದು ಒನ್ನೂರಾಗಲು ಒಂದು ವಾರವೂ ಬೇಡ.
- ಕೆಲವೊಮ್ಮೆ ರಭಸವಾದ ನೀರಿನ ಸಿಂಪಡಣೆಯಿಂದಲೂ ಕೀಟಗಳು ಹತೋಟಿಗೆ ಬರಬಲ್ಲವು.
- ಬಾಧೆಯ ಆರಂಭಿಕ ಹಂತದಲ್ಲಿ ಸೋಪಿನ ನೀರಿನ ಸಿಂಪಡಣೆ ತಕ್ಕಮಟ್ಟಿಗೆ ಪರಿಣಾಮಕಾರಿ. ಕ್ಷಾರೀಯ ರಸಸಾರದ ಸೋಪ್ ನೀರು ಮೃದು ದೇಹದ ಕೀಟಗಳನ್ನು ನಿರ್ಜಲೀಕರಣಕ್ಕೆ ತುತ್ತಾಗಿಸಿ ಸಾಯಿಸುತ್ತದೆ.
- ಆರಂಭಿಕ ಹಂತದಲ್ಲಿ ಯಾವುದಾದರೂ ಹಿಟ್ಟನ್ನು ನೀರಲ್ಲಿ ಕದಡಿ ಗಿಡದ ಮೇಲೆ ಹೊಯ್ಯಬಹುದು. ಹಿಟ್ಟು ಒಣಗಿ ಸಿಪ್ಪೆಯಾಗಿ ಕಿತ್ತು ಉದುರುವಾಗ ಕೀಟಗಳೂ ನಿಯಂತ್ರಣಕ್ಕೆ ಬರುತ್ತವೆ.
- ಶುಂಠಿ, ಬೆಳ್ಳುಳ್ಳಿ, ಈರುಳ್ಳಿ ಜಜ್ಜಿ ಹಾಕುವುದು; ಗೋಮೂತ್ರ, ಹುಳಿ ಮಜ್ಜಿಗೆ ಸಿಂಪಡಣೆ ಇವೆಲ್ಲಾ ಸ್ವಲ್ಪಮಟ್ಟಿಗೆ ಕೀಟಗಳನ್ನು ವಿಕರ್ಷಣೆ ಮಾಡಬಲ್ಲವು. ಅದೂ ಆರಂಭಿಕ ಹಂತದಲ್ಲಿ. ಆದರೆ ಅಷ್ಟು ಪರಿಣಾಮಕಾರಿಯಲ್ಲ.
- ಪ್ರಯೋಗಾಲಯಗಳಲ್ಲಿ ಬಳಸುವ ಶೇ. 70 ಆಲ್ಕೋಹಾಲ್ ಅನ್ನು ಹತ್ತಿಯಲ್ಲಿ ಅದ್ದಿ ಕೀಟಗಳಿದ್ದಲ್ಲಿ ಸವರಬಹುದು. ಸಕ್ಯುಲೆಂಟ್ ಸಸ್ಯಗಳಲ್ಲಿ ಮಿಲಿ ಬಗ್ ಹತೋಟಿಗೆ ಇದೇ ವಿಧಾನ ಪಾಲಿಸಲಾಗುತ್ತದೆ.
- ಬಿಳಿನೊಣ ಥ್ರಿಪ್ಸ್‌ನಂಥ ಹಾರುವ ಕೀಟಗಳನ್ನು ಆಕರ್ಷಿಸಿ ಸೆರೆಹಿಡಿಯಲು 'ಹಳದಿ ಸ್ಟಿಕಿ ಟ್ರಾಪ್' ಬಳಸಬಹುದು. ಬಾಧೆ ತೀವ್ರವಾಗಿದ್ದಲ್ಲಿ ಸಾವಯವ ಮೂಲದ ಬೇವಿನ ಎಣ್ಣೆ ಸಿಂಪಡಣೆ ಮಾಡಬಹುದು.

ಈ ಯಾವುದೇ ವಿಧಾನದಲ್ಲಿ ಹತೋಟಿ ಸಾಧ್ಯವಾಗದಿದ್ದಲ್ಲಿ ಕೊನೆ ಹಂತವಾಗಿ ಸರಿಯಾದ ಪ್ರಮಾಣದಲ್ಲಿ ತೀವ್ರ ಎಚ್ಚರಿಕೆಯೊಂದಿಗೆ ಕ್ಲೋರೋಪೈರಿಫಾಸ್, ಇಮಿಡಾಕ್ಲೋಪ್ರಿಡ್ ರಾಸಾಯನಿಕ ಕೀಟನಾಶಕಗಳ ಸಿಂಪಡಣೆ ಮಾಡಬಹುದು.

ಪ್ರತಿಕ್ರಿಯಿಸಿ: feedback@sudha.co.in

